**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 04.03.2025**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ದಿಃ 26.03.2022 ರಂದು ಅಪಘಾತ ಆಯಿತು. ಆ ದಿನ ನಾನು ಪಾಂಡವಪುರದಿಂದ ಮೇಲುಕೋಟೆಗೆ ಸ್ವಿಫ್ಟ್ ಡಿಸ್ಟೈರ್ ಕಾರಿನಲ್ಲಿ ಹೋಗುತ್ತಿದ್ದೆನು. ಸದರಿ ಕಾರು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಧರ್ಮೇಶ್ ಎಂಬುವವರಿಗೆ ಸೇರಿತ್ತು. ನಾನು ಮತ್ತು ರಾಮಚಂದ್ರರವರು ಕಾರಿನಲ್ಲಿ ಹೋಗುತ್ತಿದ್ದೆವು. ನಿರ್ದೇಶಕರು ಆ ದಿನ ಆ ಕಾರಿಗೆ ಚಾಲಕನಾಗಿರಲು ನನ್ನನ್ನು ನೇಮಿಸಿಕೊಂಡಿದ್ದರು. ಆ ಕಾರಿನಲ್ಲಿ ಇಬ್ಬರು ಪ್ರಯಾಣ ಮಾಡುತ್ತಿದ್ದೆವು. ಆ ಕಾರಿನ ಸಂಃ ಕೆಎ-11/ಬಿ-8962. ಮೇಲುಕೋಟೆ ಕಡೆಯಿಂದ ಕೆ ಎಸ್ ಆರ್ ಟಿ ಸಿ ವಾಹನ ಬಂತು. ಅದರ ನಂಬರ್ ಹೇಳುತ್ತೀರಾ ಎಂದರೆ ಸಾಕ್ಷಿ ಕೆಎ-11/ಎಫ್-0438 ಆಗಿತ್ತು. ನಾವು ಹೋಗುತ್ತಿದ್ದ ಕಾರಿಗೆ ಎದುರುಭಾಗದಿಂದ ಕೆ ಎಸ್ ಆರ್ ಟಿ ಸಿ ಬಸ್ಸು ಬಂತು.

2. ಮೇಲುಕೋಟೆ ಕಡೆ ಹೋಗುವಾಗ ಒಂದು ಕೆರೆ ಇದೆ, ಆ ಕೆರೆ ಕಣಿವೆ ಬಳಿ ಅಪಘಾತವಾಯಿತು. ಆ ರಸ್ತೆ ಮಧ್ಯ ಡಿವೈಡರ್ ಇರಲಿಲ್ಲ. ರಾಮಚಂದ್ರರವರು ಕಾರಿನ ಮುಂದಿನ ಶೀಟಿನಲ್ಲಿ ಕುಳಿತ್ತಿದ್ದರು. ಸ್ವಲ್ಪ ದೂರದ ಅಂತರದಲ್ಲಿ ಬಸ್ಸು ಬರುವುದನ್ನು ನೋಡಿದೆನು. ಬಸ್ಸು ಎಷ್ಟು ಕಿ ಮಿ ವೇಗಮಿತಿಯಲ್ಲಿ ಇತ್ತು ಎಂದರೆ ಸಾಕ್ಷಿ ತುಂಬಾ ವೇಗದಲ್ಲಿ ಇತ್ತು ಎಂದು ಹೇಳುತ್ತಾರೆ. ಅಪಘಾತ ಮೇಲುಕೋಟೆಯ ರಸ್ತೆಯ

ಇಳಿಜಾರು ಕಣಿವೆ ಕೆರೆಯ ಬಳಿ ಆಗಿದೆ ಎಂದರೆ ಸರಿ. ಸಾಕ್ಷಿ ತಿರುವು ಇರುವುದಿಲ್ಲ ಎಂದು ಹೇಳುತ್ತಾರೆ. ರಸ್ತೆಗೆ ವಿಭಜನೆಯ ಪಟ್ಟಿ ಹಾಕಿತ್ತು ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ಸು ರಸ್ತೆಯ ನಿಯಮಗಳನ್ನು ಪಾಲಿಸಿಕೊಂಡು ಬಂದು ರಸ್ತೆಯ ಎಡಭಾಗ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ನೀವೇ ಕಾರನ್ನು ಇಳಿಜಾರಿನಲ್ಲಿ ವೇಗವಾಗಿ ಬಂದು ತಿರುವಿನಲ್ಲಿ ರಸ್ತೆಯ ಮೇಲೆ ಹಾಕಿದ್ದ ಪಟ್ಟಿಯನ್ನು ದಾಟಿ ಬಸ್ಸಿನ ಬಲಭಾಗಕ್ಕೆ ಸ್ವತಃ ಡಿಕ್ಕಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಗತಿ ನಿಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

3. ಬಸ್ಸಿನ ಚಾಲಕ ನಿಮ್ಮ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ರಾಮಚಂದ್ರವರ ಮಗ ದೂರನ್ನು ಕೊಟ್ಟಿದ್ದಾರೆ. ದೂರನ್ನು ಕೊಡಲು ನಮ್ಮ ಊರಿನವರಾದ ಸ್ವಾಮಿಗೌಡ, ಮಂಜೇಗೌಡ ಎಂಬುವವರು ಮಾಹಿತಿ ನೀಡಿದ್ದಾರೆ. ನನಗೆ ಕಾರನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇತ್ತು. ರಾಮಚಂದ್ರರವರು ಪ್ರಭಾವ ಬಳಸಿ ಕೆ ಎಸ್ ಆರ್ ಟಿ ಸಿ ಚಾಲಕನ ವಿರುದ್ಧ ಸುಳ್ಳು ದೂರು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಚಾಲನಾ ಪರವಾನಿಗೆ ಮತ್ತು ಕಾರಿಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ.

4. ನೀವು ಕಾರನ್ನು ಚಾಲನೆ ಮಾಡುವಾಗ ಮದ್ಯಪಾನ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಅಪಘಾತವಾದ ಕೂಡಲೇ ಮೊದಲು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ

ಹೋದೆವು. ಈ ಅಪಘಾತದಿಂದ ನನ್ನ ಬಲಭುಜ, ತೋಳು ಬೆನ್ನು ಮತ್ತು ಎದೆ ಭಾಗಕ್ಕೆ ಗಾಯಗಳು ಆಗಿದ್ದವು. ನಂತರ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಹೋದೆವು. ಚಿಕಿತ್ಸೆಗಾಗಿ ಸುಮಾರು ರೂ.1 ಲಕ್ಷ ಖರ್ಚಾಗಿದೆ. ನನಗೆ ಶಸ್ತ್ರ ಚಿಕಿತ್ಸೆ ಮಾಡಲಿಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಆಸ್ಪತ್ರೆಗೆ 4-5 ಸಲ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಿಮ್ಮ ಊರಿನಿಂದ ಮೈಸೂರಿಗೆ ಬಸ್ಸಿನ ಸೌಕರ್ಯ ಚೆನ್ನಾಗಿದೆ ಎಂದರೆ ಸರಿಯಲ್ಲ. ನೀವು ಆಸ್ಪತ್ರೆಗೆ ಹೋಗಿ ಬರಲು ಬಾಡಿಗೆ ಕಾರನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನಿಮ್ಮನ್ನು ನಿಮ್ಮ ಕುಟುಂಬದವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಶಶಾಂಕ್ ಎಂಬುವವರನ್ನು ನೇಮಿಸಿಕೊಂಡಿದ್ದೆ ಎಂದು ಹೇಳುತ್ತಾರೆ. ಶಶಾಂಕ್ ನೋಡಿಕೊಳ್ಳುತ್ತಿದ್ದರು ಎನ್ನುವ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನೀವು ಯಾವುದೇ ಕೆಲಸದವರನ್ನು ಇಟ್ಟುಕೊಳ್ಳದೇ ಇದ್ದರು ಇಟ್ಟುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

5. ಅಪಘಾತಕ್ಕೆ ಮೊದಲು ನಾನು ಕೆ ಎಂ ಎಫ್ ನಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದೆನು. ನೇಮಕಾತಿ ಆದೇಶ ಪತ್ರವನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಾನು ತಿಂಗಳಿಗೆ ರೂ.20 ಸಾವಿರ ಸಂಪಾದನೆ ಮಾಡುತ್ತಿದ್ದೆನು. ನೀವು ಮೊದಲಿನಂತೆ ಆರೋಗ್ಯವಾಗಿರುತ್ತೀರಾ ಎಂದರೆ ಸರಿಯಲ್ಲ. ನೀವು ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ

*ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಈಗ್ಗೆ 5 ವರ್ಷಗಳಿಂದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾಗಮಂಗಲ ಆರ್ ಟಿ ಓ ಕಚೇರಿಯಿಂದ ಡಿ ಎಲ್ ಪಡೆದುಕೊಂಡಿದ್ದೇನೆ. ನಿಮ್ಮ ತಪ್ಪಿನಿಂದ ಅಪಘಾತ ಆಗಿರುವುದರಿಂದ ಎದುರುದಾರರು ನಷ್ಟ ಪರಿಹಾರ ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮತ್ತು ನೀವು ಷಾಮೀಲಾಗಿ ಈ ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***